ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 ದಿನಾಂಕ: 19–02–2019

# ಪತ್ರಿಕಾ ಆಮಂತ್ರಣ

1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಮಹಿಳಾ ಸಹಾಯವಾಣಿ 181 ದಮನಿತ ಮಹಿಳೆಯರ ಕೋಶಗಳ ಉದ್ಘಾಟನೆ, ಮುಖ್ಯಮಂತ್ರಿ ಮಾತೃಶ್ರೀ ಯೋಜನೆಯ ಗೀತೆ, ಸ್ವಾಧಾರ ಆನ್‌ಲೈನ್ ತಂತ್ರಾಂಶ ಬಿಡುಗಡೆ, ಟ್ರಾನ್ಸಿಟ್ ಹಾಸ್ಟೆಲ್ ಮತ್ತು ಒನ್ ಸ್ಟಾಪ್ ಸೆಂಟರ್ ಯೋಜನೆಗಳ ಪ್ರಚಾರ ಸಾಮಗ್ರಿಗಳ ಬಿಡುಗಡೆ ಕಾರ್ಯಕ್ರಮ:

   **ಉದ್ಘಾಟನೆ:**

   ಡಾ. ಜಯಮಾಲಾ ರಾಮಚಂದ್ರ,
   ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.

   ದಿನಾಂಕ 20–02–2019, ಬುಧವಾರ, ಸಮಯ: ಬೆಳಿಗ್ಗೆ 11–00 ಗಂಟೆಗೆ

   ಸ್ಥಳ: ಬಾಲಭವನ, ಕಬ್ಬನ್ ಪಾರ್ಕ್ ಬೆಂಗಳೂರು.

**2. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ "ಸಂತ ಕವಿ ಸರ್ವಜ್ಞ ಜಯಂತಿ" ಕಾರ್ಯಕ್ರಮ :**

**ಗೌರವ ಉಪಸ್ಥಿತಿ:**

ಡಾ. ಜಿ. ಪರಮೇಶ್ವರ್
ಉಪಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

**ಉದ್ಘಾಟನೆ:**

ಡಿ.ಕೆ. ಶಿವಕುಮಾರ್,
ಜಲಸಂಪನ್ಮೂಲ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು.

**ಮುಖ್ಯ ಅತಿಥಿಗಳು:**

ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ,
ಮಹಾಪೌರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಅಧ್ಯಕ್ಷತೆ:**
ಉದಯ್ ಬಿ. ಗರುಡಾಚಾರ್,
ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ,

ದಿನಾಂಕ: 20-02-2019, ಬುಧವಾರ ಸಮಯ: ಬೆಳಿಗ್ಗೆ 11.30 ಗಂಟೆಗೆ
ಸ್ಥಳ: ಕನ್ನಡ ಭವನ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಂಗಳೂರು.

## ಪತ್ರಿಕಾ ಪ್ರಕಟಣೆ

## ಮಾವು ಬೆಳೆಯನ್ನು ಹೂ ಬಿಡುವ ಮತ್ತು ಕಾಯಿಕಚ್ಚುವ ಹಂತದಲ್ಲಿ ಬಾಧಿಸುವ ರೋಗ ಮತ್ತು ಅವುಗಳ ನಿರ್ವಹಣೆ

ಬೆಂಗಳೂರು, ಫೆಬ್ರವರಿ 19 (ಕರ್ನಾಟಕ ವಾರ್ತೆ)

ಮಾವು ಬೆಳೆಯಲ್ಲಿ ಹೂ ಬಿಡುವ ಮತ್ತು ಕಾಯಿ ಕಚ್ಚುವ ಹಂತದಲ್ಲಿ ಬಾಧಿಸುವ ಈ ಕೆಳಕಂಡ ಪ್ರಮುಖ ಕೀಟ ಮತ್ತು ರೋಗಗಳು ಇಳುವರಿಯನ್ನು ಕುಂಠಿತಗೊಳಿಸುತ್ತವೆ.

ಜಿಗಿಹುಳು:

ಜಿಗಿಹುಳು ಬೆಣೆ ಆಕಾರದಲ್ಲಿರುತ್ತವೆ ಪ್ರೌಢ ಮತ್ತು ಅಪ್ಸರೆಗಳು (ಮರಿಹುಳು) ಹೂ ಗೊಂಚಲಿನಿಂದ ರಸ ಹೀರುತ್ತದೆ. ಇದರಿಂದ ಹೂಗಳು ಉದುರುತ್ತೆ. ಜಿಗಿಹುಳುಗಳು ಅಂಟು ಪದಾರ್ಥವನ್ನು ಸ್ರವಿಸುತ್ತವೆ ಅಥವಾ ಜೇನುಗರೆಯುತ್ತವೆ. ಇದರಿಂದಾಗಿ ಹೂ ಗೊಂಚಲಿನಲ್ಲಿ ಕಪ್ಪು ಬೂಷ್ಟ್ ಬೆಳವಣಿಗೆಯಾಗುತ್ತವೆ.

**ಬೂದಿರೋಗ:**

ಹೂ ಗೊಂಚಲು ಮತ್ತು ಚಿಗುರೊಡೆದ ಎಲೆಗಳ ಮೇಲೆ ಬೂದಿಯಂತಹ ಬೆಳವಣಿಗೆ ಕಂಡು ಬಂದು ಹೂಗು ಉದುರುತ್ತವೆ ಹಾಗೂ ಎಲೆಗಳು ಮುರುಟುತ್ತವೆ. ಎಳೆಯ ಕಾಯಿಗಳು ಕೂಡಾ ಉದುರಿಹೋಗುತ್ತವೆ.

**ಚಿಬ್ಬುರೋಗ:**

ಹೂ ಗೊಂಚಲಿನ ಮೇಲೆ ಎಳೆಯ ಎಲೆ ಹಾಗೂ ಟೊಂಗೆಗಳ ಮೇಲೆ ಕಂದು ಬಣ್ಣದ ಚುಕ್ಕೆ ಕಂಡು ಬಂದು, ವೃದ್ಧಿಯಾಗಿ ಎಲೆ ಒಣಗುವಂತೆ ಮಾಡುತ್ತದೆ.

**ನಿರ್ವಹಣೆ ಕ್ರಮಗಳು:**

ಹೂ ಬಿಡುವುದಕ್ಕೆ ಮುಂಚೆ ಹಾಗೂ ಕಾಯಿ ಕಟ್ಟಿದ ಕೂಡಲೇ 4 ಗ್ರಾಂ ಕಾರ್ಬರಿಲ್ 50 ಡಬ್ಲ್ಯೂಪಿ ಅಥವಾ 2 ಮಿಲೀ. ಮೆಲಾಥಿಯಾನ್ 50 ಇಸಿ ಅಥವಾ 0.25 ಮಿಲೀ . ಇಮಿಡಾಕ್ಲೋಪ್ರಿಡ್ ಮತ್ತು 3 ಗ್ರಾಂ ನೀರಿನಲ್ಲಿ ಕರಗುವ ಗಂಧಕ ಅಥವಾ 1 ಗ್ರಾಂ ಕಾರ್ಬೆನ್‌ಡಜಿಮ್ ಅಥವಾ 1 ಮಿಲೀ. ಹೆಕ್ಸಕೋನಜೋಲ್ 5 ಇಸಿ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಅವಶ್ಯವಿದ್ದಲ್ಲಿ ಇದೇ ಸಿಂಪರಣೆಯನ್ನು ಪುನರಾವರ್ತಿಸಬೇಕು.

ಚಿಬ್ಬು ರೋಗ ಲಕ್ಷಣಗಳು ಮುಂದುವರೆದಲ್ಲಿ ಶೇ 1 ರ ಬೋರ್ಡೋ ದ್ರಾವಣ ಇಲ್ಲವೆ ಪ್ರತಿ ಲೀಟರ್ ನೀರಿನಲ್ಲಿ 1 ಗ್ರಾಂ ಕಾರ್ಬೆನ್‌ಡಜಿಮ್ ಅಥವಾ 1 ಗ್ರಾಂ ಮಿಥೈಲ್ ಥಯೋಫಿನೆಟ್ ಶೇ 70 ಅಥವಾ 2 ಗ್ರಾಂ ಕ್ಲೋರೋಥಯಾನಿಲ್ ಕರಗಿಸಿ ಸಿಂಪರಣೆ ಮಾಡಬೇಕು.

ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲೆಗಳ ಹಾರ್ಟಿ ಕ್ಲಿನಿಕ್ ಅಥವಾ ತಾಲ್ಲೂಕಿನ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

## ಬೆಂಗಳೂರು ಜಲಮಂಡಲಿ: ಫೆಬ್ರವರಿ 20 ರಂದು ಸಕಾನಿಅ(ಕೇಂದ್ರ-3) ಉಪವಿಭಾಗದಲ್ಲಿ ನೀರಿನ ಅದಾಲತ್

ಬೆಂಗಳೂರು, ಫೆಬ್ರವರಿ 19 (ಕರ್ನಾಟಕ ವಾರ್ತೆ)

ಬೆಂಗಳೂರು ಜಲಮಂಡಲಿಯ ಸಕಾನಿಅ(ಕೇಂದ್ರ-3) ಉಪವಿಭಾಗದಲ್ಲಿ ಬುಧವಾರ ದಿನಾಂಕ:20.02.2019 ರಂದು ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ

ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ನೀರಿನ ಅದಾಲತ್‌ಅನ್ನು ಬೆಳಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸಲಾಗುತ್ತದೆ.

ದಿನಾಂಕ:20.02.2019 ರಂದು ಸಕಾನಿಅ(ಕೇಂದ್ರ-3) ಉಪವಿಭಾಗ ವ್ಯಾಪ್ತಿಯಲ್ಲಿ ಬರುವ ಫ್ರೇಜರ್‌ಟೌನ್, ಮಚಲಿ ಬೆಟ್ಟ, ಪಿಳ್ಳಣ್ಣ ಗಾರ್ಡನ್, ಡಿ.ಜೆ.ಹಳ್ಳಿ ಸೇವಾಠಾಣೆಗಳಿಗೆ ಸಂಬಂಧಿಸಿದ ವಿವಾದಗಳನ್ನು ನೇತಾಜಿ ರಸ್ತೆ, ಫ್ರೇಜರ್ ಟೌನ್ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ-3) ಉಪವಿಭಾಗ ಕಚೇರಿಯಲ್ಲಿ ಪರಿಶೀಲಿಸಿ ಬಗೆಹರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ): 22945187. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ-3) ಉಪವಿಭಾಗ: 22945167.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ.

ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅದಾಲತ್ ಸೌಲಭ್ಯ ಬಳಸಿಕೊಳ್ಳ ಬಹುದಾಗಿದೆ.

## BWSSB:Water Adalath in AEE(Central-3) sub division on February 20th

*****

BWSSB water Adalath is held on 20.02.2019 in AEE(Central-3) sub division from 9:30.am to 11.00 am to settle the grievances concerned with the water billing, delay in providing water supply & sanitary connections, delay in converting from domestic connection to non domestic connection & other related issues.

The disputes of consumers of Frazer Town, Machalibetta, Pillanna Garden, DJ Halli, service station coming under AEE(Central-3) sub division, will be discussed in detail & problems will be settled in the office of the Assistant Executive Engineer (Central-3) sub division, Netaji Road, Frazer Town.

Details regarding the adalath can be obtained by the office of EE(Central): 22945187, or office of AEE (Central-3): 22945167.

For any problems regarding the water supply and all, publics can contact 24x7 call centre :22238888 helpline number:1916 & whats app no: 8762228888.

Public can utilize this adalath facilities to solve the problems regarding water supply.